ಓ.ಎಸ್. ನಂ. 1 69/2013
ಪಿ ಡಬ್ಲ್ಯೂ -1

**<u>ಸಾಕ್ಷಿಯನ್ನು ದಿನಾಂಕ: 23-09-2025 ರಂದು ಕರೆಸಿ ಪ್ರಮಾಣೀಕರಿಸಲಾಯಿತು.</u>**

**<u>ಪಾಟೀಸವಾಲು 10 ನೇ ಪ್ರತಿವಾದಿ ಪರ ವಕೀಲರಾದ ಶ್ರೀ HRR ರವರಿಂದ</u>**

**1.** ದಾವಾ ಆಸ್ತಿಯ ಪಹಣಿ ಪತ್ರಿಕೆಯು 10 ನೇ ಪ್ರತಿವಾದಿ ಹೆಸರಿಗೆ ಬರುತ್ತಿರುವ ಕಾರಣ ಅವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುತ್ತೇನೆ. ಪ್ರತಿವಾದ ಪತ್ರದ ಆಸ್ತಿಯಲ್ಲಿ 10 ನೇ ಪ್ರತಿವಾದಿ ಕುಟುಂಬದವರು ಸ್ವಾದೀನದಲ್ಲಿರುತ್ತಾರೆಂದರೆ ಸರಿಯಲ್ಲ, ಸದರಿ ಆಸ್ತಿಯನ್ನು 10 ನೇ ಪ್ರತಿವಾದಿ ಕ್ರಯಕ್ಕೆ ಪಡೆದಿರುವ ಬಗ್ಗೆ ಹೇಳುತ್ತಿರುತ್ತಾರೆ. ನನ್ನ ತಂದೆಗೆ ಸರ್ವೆ ನಂ. 11 ಕ್ರಯವಾಗಿರುತ್ತದೆ. ದಿನಾಂಕ 29-04-1992 ರಂದು ಲಕ್ಷ್ಮಮ್ಮ ಕೋಂ ಹುಚ್ಚಪ್ಪ ರವರು ಪ್ರತಿವಾದ ಪತ್ರದಲ್ಲಿನ ಆಸ್ತಿಯನ್ನು ನರಸಯ್ಯ ಬಿನ್. ವೀರಬದ್ರಯ್ಯರವರಿಂದ ಕ್ರಯಕ್ಕೆ ಪಡೆದಿರುತ್ತಾರೆಂದರೆ ನನಗೆ ಗೊತ್ತಿಲ್ಲ. ಅಂದಿನಿಂದ 2004 ವರೆಗೂ ಸದರಿ ಆಸ್ತಿಯ ಖಾತೆಯು ಲಕ್ಷ್ಮಮ್ಮ ರವರ ಹೆಸರಿನಲ್ಲಿದ್ದು ಅವರೇ ಸ್ವಾದೀನದಲ್ಲಿದ್ದರು ಎಂದರೆ ಸರಿಯಲ್ಲ. ನಂತರ ಸದರಿ ಲಕ್ಷ್ಮಮ್ಮ ರವರು ಪ್ರತಿವಾದ ಪತ್ರದ ಆಸ್ತಿಯನ್ನು 10 ನೇ ಪ್ರತಿವಾದಿಗೆ ದಿನಾಂಕ 28-04-2004 ರಂದು ಮಾರಾಟ ಮಾಡಿರುತ್ತಾರೆಂದರೆ ನನಗೆ ಗೊತ್ತಿಲ್ಲ. ಕ್ರಯ ಪತ್ರದ ಆಧಾರದ ಮೇಲೆ 10 ನೇ ಪ್ರತಿವಾದಿಗೆ ಎಂ ಆರ್. 1/2003-04 ರಂತೆ ಖಾತೆ ಆಗಿರುತ್ತದೆಂದರೆ ನನಗೆ ಗೊತ್ತಿಲ್ಲ. ಕ್ರಯಕ್ಕೆ ಪಡೆದಾಗಿನಿಂದಲೂ 10 ನೇ ಪ್ರತಿವಾದಿ ಪ್ರತಿವಾದ ಪತ್ರದ ಆಸ್ತಿಯಲ್ಲಿ ಸ್ವಾದೀನದಲ್ಲಿದ್ದರು ಎಂದರೆ ನನಗೆ ಗೊತ್ತಿಲ್ಲ.

2. ದಿನಾಂಕ 12-07-2013 ರಂದು 10 ನೇ ಪ್ರತಿವಾದಿಯು ತನ್ನ 2 ಮತ್ತು 3 ನೇ ಮಗನ ಹೆಸರಿಗೆ ಪ್ರತಿವಾದ ಪತ್ರದ ಆಸ್ತಿಗೆ ಸಂಬಂಧಿಸಿದಂತೆ ದಾನ ಪತ್ರವನ್ನು ಬರೆದುಕೊಟ್ಟಿರುತ್ತಾರೆಂದರೆ ನನಗೆ ಗೊತ್ತಿಲ್ಲ. ದಾನ ಪತ್ರದ ಆಧಾರದ ಮೇಲೆ ರೆವಿನ್ಯೂ ದಾಖಲೆಗಳು 10 ನೇ ಪ್ರತಿವಾದಿ ಮಕ್ಕಳ ಹೆಸರಿಗೆ ಬದಲಾವಣೆ ಆಗಿದ್ದು ಅವರೇ ಸ್ವಾದೀನದಲ್ಲಿರುತ್ತಾರೆಂದರೆ ನನಗೆ ಗೊತ್ತಿಲ್ಲ. ನಾನು ಈ ದಾವೆಯನ್ನು ಸರ್ವೆ ನಂ. 11 ಕ್ಕೆ ಸಂಬಂಧಿಸಿದಂತೆ ಸಲ್ಲಿಸಿರುತ್ತೇನೆ. ನಾನು 10 ನೇ ಪ್ರತಿವಾದಿ ಕುಟುಂಬಕ್ಕೆ ಸೇರಿದ ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ಸುಳ್ಳು ದಾವೆಯನು ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

**ಓ. ಹೇ.ಕೇ.ಸರಿ ಇದೆ.**

**Sd/-**

**ಸಿ.ಜೆ ಮತ್ತು ಜೆಎಂ.ಎಫ್ ಸಿ**
**ಕೊರಟಗೆರೆ**